**ದಿಃ 14.01.2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತುಃ**

**ಪಾಟೀ ಸವಾಲುಃ ಆರೋಪಿ/ ಆರೋಪಿಗಳ ಪರ ವಕಿಲರಿಂದಃ**

ನಾನು ಬೋರ್ ಎಜೆನ್ಸಿ ಕೆಲಸ ಮಾಡುತ್ತೇನೆ. ಬೇರೆಯವರ ಕಚೇರಿಯಲ್ಲಿ ಕೆಲಸ ಮಾಡುತ್ತೇನೆ. ಅಲ್ಲಿ ನನಗೆ ಸಂಬಳವನ್ನು ಕೊಡುತ್ತಾರೆ. ನಾನು ತಿಂಗಳಿಗೆ 35 ಸಾವಿರ ರೂ ಕೊಡುತ್ತಾರೆ. ನಾನು ವಾಸ ಇರುವುದು ಶ್ರವಣಬೆಳಗೊಳದಲ್ಲಿ ಕೆಲಸವನ್ನು ಸಹ ಅಲ್ಲೆ ಮಾಡುತ್ತೇನೆ. ನನಗೆ ಒಬ್ಬಳೆ ಮಗಳು. 9ನೇ ತರಗತಿಯಲ್ಲಿ ವ್ಯಾಸಂಗ ಮಾಡುತ್ತಿದ್ದಾಳೆ. ಬೋರ್ಡಿಂಗ್ ನಲ್ಲಿ ಇದ್ದಾಳೆ. ಒಂದು ವರ್ಷಕ್ಕೆ ಫೀ ಎಲ್ಲಾ ಸೇರಿ 2 ಲಕ್ಷ ಇರುತ್ತದೆ. ಬೆಳಗೊಳದಲ್ಲಿ ಬಾಡಿಗೆ ಮನೆಯಲ್ಲಿ ಇದ್ದೇನೆ. ತಿಂಗಳಿಗೆ 3 ಸಾವಿರ ರೂ ಬಾಡಿಗೆ. ಮಗಳ ವಿದ್ಯಾಭ್ಯಾಸ ಮನೆ ಖರ್ಚಿಗೆ ಸಂಬಳ ಸಾಕಾಗುತ್ತದೆ. ಊರಿನಲ್ಲಿ ಜಮೀನು ಸಹ ಇರುತ್ತದೆ. ನಮ್ಮ ಊರಿಗೆ ಚಲ್ಯಗ್ರಾಮಕ್ಕೂ 1 ಕಿ.ಮೀ. ನನಗೆ ಆರೋಪಿ ಚಿಕ್ಕಂದಿನಿಂದಲೂ ಪರಿಚಯ. ಅವರ ಜಮೀನು ನಮ್ಮ ಜಮೀನು ಅಕ್ಕ ಪಕ್ಕ ಇರುತ್ತದೆ. ಆರೋಪಿ ವ್ಯವಸಾಯ ಮಾಡುತ್ತಾರೆ. ಆರೋಪಿಗೆ ಎಷ್ಟು ಜನ ಮಕ್ಕಳು ಎಂದು ನನಗೆ ಗೊತ್ತಿಲ್ಲ. ಅವರ ಮಗ ಏನು ಮಾಡುತ್ತಿದ್ದಾರೆ ಎಂದು ನನಗೆ ಗೊತ್ತಿಲ್ಲ. ಅವರ ಪತಿ ವ್ಯವಸಾಯ ಮಾಡುತ್ತಾರೆ. ಮನೆಯಲ್ಲಿ ಯಾರು ವಾಸ ಇದ್ದಾರೆ ಎಂದು ನನಗೆ ಗೊತ್ತಿಲ್ಲ. ಆರೋಪಿಯ ಪತಿ ಮತ್ತು ಅವರ ತಮ್ಮಂದಿರ ನಡುವೆ ಸಿವಿಲ್ ವ್ಯಾಜ್ಯ ನಡೆಯುತ್ತಿದೆ ಎಂದರೆ ನನಗೆ ಗೊತ್ತಿಲ್ಲ. ಅವರ ಜಮೀನನ್ನು ಹೊಂದಿರುತ್ತಾರೆ. ಆರೋಪಿಗೆ ಕೂಲಿ ಕೆಲಸನೇ ಆಧಾರ ಎಂದರೆ ಸರಿಯಲ್ಲ. ಅವರು ಬಿಪಿಎಲ್ ಕಾರ್ಡನ್ನು ಹೊಂದಿರುತ್ತಾರೆ ಎಂದರೆ ನಾವು ಸಹ ಬಿಪಿಎಲ್ ಕಾರ್ಡನ್ನು ಹೊಂದಿರುತ್ತೇವೆ ಎಂದು ಹೇಳುತ್ತಾರೆ. ಆರೋಪಿಗೆ ಓದು ಬರಹ ಬರುವುದಿಲ್ಲ ಅಷ್ಟು ತಿಳುವಳಿಕೆ ಇಲ್ಲ ಎಂದರೆ ಸರಿಯಲ್ಲ. ಅವರಿಗೆ ವ್ಯವಹಾರ ಜ್ಞಾನ ಇರುವುದಿಲ್ಲ ಎಂದರೆ ಸರಿಯಲ್ಲ. ಆರೋಪಿ ನನ್ನ ಹತ್ತಿರ ಕೇಳಿದ್ದು 2ವರೆ ಲಕ್ಷ. 2024 ರಲ್ಲಿ 3 ಮತ್ತು 4 ನೇ ತಿಂಗಳಿನ ಸಮಯದಲ್ಲಿ ಕೇಳಿದ್ದು ನಾನು 3/04/2024 ರಂದು 2 ವರೆ ಲಕ್ಷ

ರೂಗಳನ್ನು ಕೇಳಿದ್ದು ಮನೆಯಲ್ಲಿ ಸಮಸ್ಯೆ ಇದೆ ಎಂದು ಕೇಳಿರುತ್ತಾರೆ. ಪತಿ ಪತ್ನಿ ಇಬ್ಬರು ಬಂದಿದ್ದರು. ನಮ್ಮ ಶ್ರವಣಬೆಳೆಗೊಳ ಮನೆಗೆ ಬಂದು ಕೇಳಿದರು. ಯಾವ ಉದ್ದೇಶಕ್ಕೆ ಎಂದು ಹೇಳಿರುವುದಿಲ್ಲ ಆದರೆ ಮನೆಯಲ್ಲಿ ಸಮಸ್ಯೆ ಎಂದು ಹೇಳಿರುತ್ತಾರೆ, ನಾನು 4 ನೇ ತಿಂಗಳಲ್ಲಿ ದುಡ್ಡನ್ನು ಕೊಟ್ಟಿರುತ್ತೇನೆ. ನಾನು ಬೆಳಗೊಳದಲ್ಲಿ ದುಡ್ಡನ್ನು ಕೊಟ್ಟಿರುತ್ತೇನೆ. ಅವರು 2ವರೆ ಲಕ್ಷ ಕೇಳಿದ್ದು ನಾನು 2ಲಕ್ಷದ 25 ಸಾವಿರ ರೂಾಗಳನ್ನು ಕೊಟ್ಟಿರುತ್ತೇನೆ. ದುಡ್ಡನ್ನು ಪಡೆದುಕೊಂಡ ದಿನವೇ ಒಂದು ತಿಂಗಳಲ್ಲಿ ಕೊಡುತ್ತೇವೆ ಎಂದು ಚೆಕ್ಕನ್ನು ಕೊಟ್ಟಿರುತ್ತಾರೆ. ಆರೋಪಿಯ ಪತಿಯವರ ಚೆಕ್ಕನ್ನು ಕೊಟ್ಟಿರುವುದಿಲ್ಲ ತನ್ನ ಪತ್ನಿಯ ಹೆಸರಿನಲ್ಲಿ ಖಾತೆ ಇರುತ್ತದೆ ಎಂದು ಪತ್ನಿಯ ಚೆಕ್ಕನ್ನು ಕೊಟ್ಟಿರುತ್ತಾರೆ. ಹಣವನ್ನು ಕೇಳಲು ಪತಿ ಪತ್ನಿ ಇಬ್ಬರು ಬಂದಿರುತ್ತಾರೆ. ದುಡ್ಡನ್ನು ಪಡೆಯುವಾಗಲು ಇಬ್ಬರು ಇರುತ್ತಾರೆ. ಚೆಕ್ ಕೊಟ್ಟಾಗಲು ಇಬ್ಬರು ಇರುತ್ತಾರೆ. ಹೆಚ್ ಡಿ ಎಫ್ ಸಿ ಬ್ಯಾಂಕಿನ ಚೆಕ್ಕನ್ನು ಕೊಟ್ಟಿರುತ್ತಾರೆ. ಚೆಕ್ಕನ್ನು ಅವರೇ ಬರೆಸಿಕೊಂಡು ಬಂದಿರುತ್ತಾರೆ. ಆರೋಪಿ ಜಯಲಕ್ಷ್ಮಮ್ಮ ಅದಕ್ಕೆ ಸಹಿ ಹಾಕಿರುತ್ತಾರೆ. ಆರೋಪಿ ಭರ್ತಿ ಮಾಡಿದ ಚೆಕ್ಕನ್ನು ಕೊಟ್ಟಿದ್ದು ದಿನಾಂಕವನ್ನು ಮಾತ್ರ ನಾನೇ ಹಾಕಿರುತ್ತೇನೆ. ಈಗ ನನಗೆ ತೋರಿಸುತ್ತಿರುವ ವಕಾಲತ್ ನಲ್ಲಿರುವ ಸಹಿ ನನ್ನದೇ. ಚೆಕ್ ನಲ್ಲಿರುವ ಬರವಣಿಗೆ ನನ್ನದೇ ಎಂದರೆ ಸರಿಯಲ್ಲ. ಚೆಕ್ ನಲ್ಲಿ ನಾನು ಬರವಣಿಗೆ ಮಾಡಿರುತ್ತೇನೆ ಎಂದರೆ ಸರಿಯಲ್ಲ. ಅದನ್ನು ಪ್ರಯೋಗಾಲಯಕ್ಕೆ ಕಳುಹಿಸಲು ತೊಂದರೆ ಇರುವುದಿಲ್ಲ. ಆ ಬರವಣಿಗೆಯನ್ನು ನಾನು ಮಾಡಿರುತ್ತೇನೆ ಎಂದರೆ ಸರಿಯಲ್ಲ. ಸಾಕ್ಷಿದಾರರು ಬೇರೆ ಯಾರು ಇರಲಿಲ್ಲ. ಆರೋಪಿಯ ಜೊತೆ ಅವರ ಪತಿ ಇದ್ದರು. ನಾನು ಹಣವನ್ನು ಆರೋಪಿಯ ಮನೆಗೂ ಹೋಗಿ ಕೆಳಿರುತ್ತೇನೆ ಬೆಳಗೊಳಕ್ಕೂ ಹೋಗಿ ಕೇಳಿರುತ್ತೇನೆ. ನಾನು ಈ ನ್ಯಾಯಾಲಯದಲ್ಲಿ ಈ ಕೇಸನ್ನು ಹೊರತು ಪಡಿಸಿ ಇನ್ನೊಂದು ಚೆಕ್ ಕೇಸ್ ಹಾಕಿರುತ್ತೇನೆ. ಅದು 1ವರೆ ಲಕ್ಷ ರೂ ಆಗಿರುತ್ತದೆ. ಅದು 2022 ರಲ್ಲಿ ಹಾಕಿರುತ್ತೇನೆ. ಅದರಲ್ಲಿ ಆರೋಪಿ ತಲೆ ಮರೆಸಿಕೊಂಡಿರುತ್ತೇನೆ. ಚೆಕ್ ಕೇಸು ಈ ಎರಡು ಬಿಟ್ಟು ಬೇರೆ ಯಾವುದು

ಇರುವುದಿಲ್ಲ. ಊರಿನಲ್ಲಿ ಚೀಟಿ ವ್ಯವಹಾರ ನಡೆಯುತ್ತದೆ ಎಂದರೆ ನನಗೆ ಗೊತ್ತಿಲ್ಲ. ನಾನು ಯಾವುದೇ ಚೀಟಿಯನ್ನು ಹಾಕಿರುವುದಿಲ್ಲ. ನಾನು ಚೀಟಿ ವ್ಯವಹಾರ ಮಾಡುತ್ತೇನೆ ಎಂದರೆ ಸರಿಯಲ್ಲ. ಚೀಟಿಯನ್ನು ಕೂಗಿದಾಗ ಖಾಲಿ ಚೆಕನ್ನು ಪಡೆದುಕೊಂಡಿರುತ್ತೇನೆ ಎಂದರೆ ಸರಿಯಲ್ಲ. ನಾನು ಚೀಟಿ ವ್ಯವಹಾರ ಮಾಡುವುದಿಲ್ಲ. ಅವರು ಕಂತನ್ನು ಕಟ್ಟದೇ ಇದ್ದಾಗ ಈ ರೀತಿ ಚೆಕ್ ಕೇಸನ್ನು ಹಾಕುತ್ತೇನೆ ಎಂದರೆ ಸರಿಯಲ್ಲ. ಚೆಕ್ ನಲ್ಲಿ ಬರವಣಿಗೆ ಮತ್ತು ಸಹಿ ಬೇರೆ ಬೇರೆ ವರ್ಷದಲ್ಲಿ ನಮೂದು ಮಾಡಿರುತ್ತಾರೆ ಎಂದರೆ ಸರಿಯಲ್ಲ. ಬರವಣಿಗೆ ದಿನಾಂಕದಿಂದ ಸಹಿ 4–5 ವರ್ಷದ ಹಿಂದೆ ಆಗಿರುತ್ತದೆ ಎಂದರೆ ಸರಿಯಲ್ಲ. ಅದನ್ನು ಪ್ರಯೋಗಲಾಯಕ್ಕೆ ಕಳುಹಿಸಲು ನನ್ನ ಅಭ್ಯಂತರ ಇರುವುದಿಲ್ಲ ಎಂದರೆ ಸರಿ. ನನ್ನ ಬಳಿ ಎಷ್ಟು ವರ್ಷ ಚೆಕ್ ಇತ್ತು ಎಂದರೆ ವರ್ಷಗಳ ಕಾಲ ಇರಲಿಲ್ಲ ತಿಂಗಳುಗಳ ಕಾಲ ಇತ್ತು. 2 ತಿಂಗಳುಗಳ ಕಾಲ ಚೆಕ್ ಮಾತ್ರ ನನ್ನ ಬಳಿ ಇತ್ತು. ಎಷ್ಟು Transaction ಆಗಿದೆ ಎಂದು ನಾನು ಗಮನಿಸಿರುವುದಿಲ್ಲ. ಊರಿನಲ್ಲಿ ಧರ್ಮಸ್ಥಳ ಸಂಘ ಸ್ವಸಹಾಯಕ ಸಂಘ ಇದೆ ಎಂದರೆ ನನಗೆ ಗೊತ್ತಿಲ್ಲ. ಸದಸ್ಯರು ಆಗ ಚೆಕ್ ಖಾತೆ ಹೊಂದಿರುತ್ತಾರೆ ಎಂದರೆ ನನಗೆ ಅದರ ಬಗ್ಗೆ ಗೊತ್ತಿಲ್ಲ. ಸಾಮಾನ್ಯವಾಗಿ ಸಾಲ ಕೊಡುವಾಗ ಎದುರುದಾರರ ಆದಾಯದ ಬಗ್ಗೆ ತಿಳಿದುಕೊಳ್ಳುತ್ತೇವೆ ಎಂದರೆಸ ರಿ . ಎದುರುದಾರರಿಗೆ ಹಣ ಕೊಟ್ಟರೆ ಕೂಲಿ ಕೆಲಸ ಮಾಡುತ್ತಿದ್ದರಿಂದ ಹಣ ವಾಪಸ್ಸು ಬರುವುದಿಲ್ಲ ಎಂದರೆ ಗೊತ್ತು ಎಂದರೆ ಸಾಕ್ಷಿಯು ಅವರು ವ್ಯವಸಾಯವನ್ನು ಮಾಡುತ್ತಾರೆ ಎಂದು ಹೇಳುತ್ತಾರೆ.

**ಹೆಚ್ಚಿನ ಪಾಟಿ ಸವಾಲಿಗೆ ಕಾಲಾವಕಾಶ ನೀಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿದಾರರ ಹೇಳಿಕೆಯನ್ನು ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಗಿದೆ)

ಓದಿ ಹೇಳಿ ಕೇಳಿ ಸರಿಯಾಗಿದೆ

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರದನ್ಯಾದಂ., ಚನ್ನರಾಯಪಟ್ಟಣ